ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

7

ಇಲಾಖೆ / ವಿಷಯ : DEPARTMENT / SUBJECT: ಸಾರಿಗೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ        ದಿನಾಂಕ : DATE : 8/4/2021

# ಸಾರಿಗೆ ಸವ್ವಾ ಸೇರು

8/4/21

## ಮುಷ್ಕರ ನಿರತ ಸಾರಿಗೆ ನೌಕರರಿಗೆ ರಾಜ್ಯದ ಸರ್ಕಾರದ ಖಾಸಗಿ ಸಡ್ಡು
## ವೇತನ ತಡೆಹಿಡಿಯುವ, ಕೆಲಸದಿಂದ ವಜಾ ಮಾಡುವ ಅಸ್ತ್ರ ಪ್ರಯೋಗ

ಬೆಂಗಳೂರು: ಸರ್ಕಾರ ಮತ್ತು ಸಾರಿಗೆ ನೌಕರರ ನಡುವಿನ ಪ್ರತಿಷ್ಠೆ ಬುಧವಾರ ಮತ್ತಷ್ಟು ತಾರಕಕ್ಕೇರಿದೆ. ಹಠಕ್ಕೆ ಬಿದ್ದಿರುವ ಸರ್ಕಾರ, ವೇತನ ತಡೆಹಿಡಿಯುವುದರ ಜತೆಗೆ ಕೆಲಸಕ್ಕೆ ಹಾಜರಾಗದ ತರಬೇತಿ ನೌಕರರನ್ನು ಕೆಲಸದಿಂದ ತೆಗೆದುಹಾಕಲು ಮುಂದಾಗಿದೆ. ಅತ್ತ ಎರಡನೇ ದಿನದಿಂದ ಮುಷ್ಕರ ತೀವ್ರಗೊಳಿಸಲು ಸಂಘಟನೆ ತೀರ್ಮಾನಿಸಿದೆ. ಪರಿಣಾಮ ಮುಷ್ಕರ ಇನ್ನೂ ಕೆಲ ದಿನ ಮುಂದುವರಿಯುವ ಸಾಧ್ಯತೆ ಇದ್ದು ಪ್ರಯಾಣಿಕರು ಆತಂಕಕ್ಕೀಡಾಗಿದ್ದಾರೆ.

ಒಂದೆಡೆ ಅನಿರ್ದಿಷ್ಟಾವಧಿ ಖಾಸಗಿ ವಾಹನಗಳ ಕಾರ್ಯಾಚರಣೆಗೆ ಸರ್ಕಾರ ಸಿದ್ಧತೆ ಮಾಡಿಕೊಳ್ಳುತ್ತಿದೆ. ಮತ್ತೊಂದೆಡೆ ನೌಕರರನ್ನು ಮಣಿಸಲು ಒಂದೊಂದೇ ಅಸ್ತ್ರಗಳನ್ನು ಪ್ರಯೋಗಿಸುತ್ತಿದೆ. ಈ ಪೈಕಿ ಬುಧವಾರ ಸಂಜೆ ಸಾರಿಗೆ ನಿಗಮಗಳ ಉನ್ನತ ಅಧಿಕಾರಿಗಳು ಸಭೆ ನಡೆಸಿ, ಕರ್ತವ್ಯಕ್ಕೆ ಹಾಜರಾಗದ ತರಬೇತಿ ನೌಕರರನ್ನು ಕೈಬಿಡಲು ಚಿಂತನೆ ನಡೆಸಿದ್ದಾರೆ. ಈ ಸಂಬಂಧ ಕೆಳ ಹಂತದ ಅಧಿಕಾರಿಗಳಿಗೆ ಸೂಚಿಸಲು ನಿರ್ಧರಿಸಲಾಗಿದೆ. ಬಿಎಂಟಿಸಿಯಲ್ಲೂ ಸೇರಿದಂತೆ ಸಾವಿರಾರು ತರಬೇತಿ ನೌಕರರಿದ್ದು ಅವರೆಲ್ಲರೂ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ.

ಹಬ್ಬದ ಹೊಸ್ತಿಲಲ್ಲೇ ಮುಷ್ಕರ ನಿರತ ಸಾರಿಗೆ ನೌಕರರ ಮಾರ್ಚ್ ತಿಂಗಳ ವೇತನ ತಡೆಹಿಡಿಯಲು ನಿರ್ಧರಿಸಲಾಗಿದೆ. ಇದು ಬಿಎಂಟಿಸಿಯ 25 ಸಾವಿರ ಚಾಲನಾ ಸಿಬ್ಬಂದಿ ಮೇಲೆ ಪರಿಣಾಮ ಬೀರಲಿದೆ. ಉಳಿದ ನಿಗಮಗಳಲ್ಲಿ ಈಗಾಗಲೇ ವೇತನ ಪಾವತಿ ಆಗಿದೆ. ಖಾಸಗಿ ವಾಹನಗಳ ಕಾರ್ಯಾಚರಣೆಗೆ ಅಡ್ಡಿ ಉಂಟುಮಾಡಿದರೆ, ಎಸ್ಮಾ ಜಾರಿಯ ಎಚ್ಚರಿಕೆಯನ್ನೂ ನೀಡಿದೆ. ▶ 6ನೇ ಪುಟಕ್ಕೆ



ಮುಷ್ಕರದಿಂದ ಜನರಿಗೆ ತೊಂದರೆ ಆಗದಂತೆ ಪರ್ಯಾಯ ಕ್ರಮ ಕೈಗೊಳ್ಳಲಾಗಿದ್ದು ಜನರು ಗೊಂದಲಕ್ಕೆ ಒಳಗಾಗಬಾರದು.

• ಲಕ್ಷ್ಮಣ ಸವದಿ, ಸಾರಿಗೆ ಸಚಿವ



ಸಾರಿಗೆ ನೌಕರರ ಮುಷ್ಕರ ಹಿನ್ನೆಲೆಯಲ್ಲಿ ಬುಧವಾರ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಖಾಸಗಿ ಬಸ್‌ಗಳ ಭರಾಟೆ ಜೋರಾಗಿತ್ತು.

### ಸರ್ಕಾರದ ವಾದ

- ಅನಿಯಮಿತವಾಗಿ ಖಾಸಗಿ ವಾಹನಗಳಿಗೆ ಪರ್ಮಿಟ್ ವಿತರಿಸುತ್ತೇವೆ. ತಿಂಗಳ ಕಾಲ ಕಾರ್ಯಾಚರಣೆಗೂ ರೆಡಿ
- ಕೆಲಸಕ್ಕೆ ಹಾಜರಾಗದೇ ಇರುವ ತರಬೇತಿ ನೌಕರರನ್ನು ವಜಾ ಮಾಡುತ್ತೇವೆ
- ಮುಷ್ಕರ ನಿರತರ ಮಾರ್ಚ್ ವೇತನ ತಡೆಹಿಡಿಯುತ್ತೇವೆ
- ಖಾಸಗಿ ವಾಹನಗಳ ಕಾರ್ಯಾಚರಣೆಗೆ ಅಡ್ಡಿ ಉಂಟುಮಾಡಿದರೆ, ಎಸ್ಮಾ ಜಾರಿ ಮಾಡುತ್ತೇವೆ

### ನೌಕರರ ವಾದ

- ಯಾವ ಕಾರಣಕ್ಕೂ ಮುಷ್ಕರ ಕೈಬಿಡುವುದಿಲ್ಲ, ನಮ್ಮದು ಅಹಿಂಸೆಯ ಸತ್ಯಾಗ್ರಹ
- ಗುರುವಾರದಿಂದ ಇನ್ನೂ ದೊಡ್ಡ ಮಟ್ಟದಲ್ಲಿ ಮುಷ್ಕರ ಮುಂದುವರಿಸುತ್ತೇವೆ
- ಸರ್ಕಾರ ನಮ್ಮ ಹೋರಾಟ ಹತ್ತಿಕ್ಕಲು ಪ್ರಯತ್ನಿಸುತ್ತಿದೆ
- 6ನೇ ವೇತನ ಆಯೋಗ ಜಾರಿಯಾದರೆ, ಒಂದು ಗಂಟೆಯಲ್ಲಿ ಮುಷ್ಕರ ಕೈಬಿಡುತ್ತೇವೆ

### ಪ್ರಯಾಣಿಕರು ಹೈರಾಣು

ಮೊದಲ ದಿನ ರಾಜ್ಯಾದ್ಯಂತ ರಸ್ತೆಗಿಳಿದಿದ್ದು ಬೆರಳೆಣಿಕೆಯಷ್ಟು ಬಸ್‌ಗಳು ಮಾತ್ರ. ಪರಿಣಾಮ ಮುಷ್ಕರದ ಬಿಸಿ ಮೊದಲ ದಿನ ಪ್ರಯಾಣಿಕರಿಗೆ ಜೋರಾಗಿಯೇ ತಟ್ಟಿತು. ಊರುಗಳಿಂದ ರಾತ್ರಿ ಬಸ್, ರೈಲುಗಳಲ್ಲಿ ಬಂದಿಳಿದವರು, ಬೆಂಗಳೂರಿಂದ ಬೇರೆ ಬೇರೆ ಊರುಗಳಿಗೆ ತೆರಳಿದವರು ನಸುಕಿನಲ್ಲಿ ಗೂಡು ಸೇರಲು ಹರಸಾಹಸ ಮಾಡಬೇಕಾಯಿತು. ಮೈಸೂರು, ಶಿವಮೊಗ್ಗ ಕೊಡಗು, ದಾವಣಗೆರೆ, ಮಂಗಳೂರು ಹಲವೆಡೆ ಖಾಸಗಿ ವಾಹನಗಳು ಸೇವೆ ಒದಗಿಸಿದವು. ಮಹಾನಗರದಲ್ಲೇ ಸಂಜೆ ವರೆಗೂ 1,124 ಖಾಸಗಿ ಬಸ್‌ಗಳು, 2 ಸಾವಿರ ಮ್ಯಾಕ್ಸಿಕ್ಯಾಬ್‌ಗಳು ಕಾರ್ಯಾಚರಿಸಿವೆ. [illegible] ನಗರಗಳಲ್ಲಿ 11,155 ಖಾಸಗಿ ವಾಹನಗಳು ಸಂಚರಿಸಿದ್ದವು.

### ವಿಶೇಷ ರೈಲಿಗೆ ಮನವಿ

ಯುಗಾದಿ ವೇಳೆ ಜನರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲು ರಾಜ್ಯ ಸರ್ಕಾರ ವಿಶೇಷ ಹೆಚ್ಚುವರಿ ರೈಲು ಸಂಚಾರ ಆರಂಭಿಸುವಂತೆ ರಾಜ್ಯ ಸರ್ಕಾರ ನೈರುತ್ಯ ರೈಲ್ವೆ ವಿಭಾಗದ ಅಧಿಕಾರಿಗಳಿಗೆ ಮನವಿ ಮಾಡಿದೆ. ಬೆಂಗಳೂರಿನಿಂದ ಬೆಳಗಾವಿಗೆ 2 ಹೆಚ್ಚುವರಿ ರೈಲು, ಬೆಂಗಳೂರು–ಬೀದರ್ 1 ರೈಲು, ಬೆಂಗಳೂರು– ಕಲ್ಬುರ್ಗಿ 2, ಬೆಂಗಳೂರು–ಕಾರವಾರ 2, ಬೆಂಗಳೂರು–ಶಿವಮೊಗ್ಗ 1 ರೈಲು, ಬೆಂಗಳೂರು–ವಿಜಯಪುರ ನಡುವೆ 1 ರೈಲು ಸೇವೆ ಆರಂಭಿಸುವಂತೆ ಮನವಿ ಮಾಡಿದ್ದಾರೆ.

# ಸಾರಿಗೆ ಸ್ತಬ್ಧ ಸೇರು

**1ನೇ ಪುಟದಿಂದ ▸** ಇದಲ್ಲದೆ, ಖಾಸಗಿಗೆ ಪರ್ಮಿಟ್ ಪಡೆಯುವ ನಿಯಮದಿಂದ ವಿನಾಯ್ತಿ ನೀಡಿ, ತಿಂಗಳ ಕಾಲ ಕಾರ್ಯಾಚರಣೆಗೆ ಒಪ್ಪಿಗೆ ಕೊಡಲಾಗಿದೆ. ಜತೆಗೆ ಹಬ್ಬದ ಹಿನ್ನೆಲೆಯಲ್ಲಿ ಸರಣಿ ರಜೆ ಇದ್ದು, ಪ್ರಯಾಣಿಕರ ಅನುಕೂಲಕ್ಕಾಗಿ ಉತ್ತರ ಕರ್ನಾಟಕ ಸೇರಿದಂತೆ ರಾಜ್ಯಾದ್ಯಂತ ಏ. 9 ಮತ್ತು 10ರಂದು ಒಂಬತ್ತು ಹೆಚ್ಚುವರಿ ರೈಲು ಹಾಗೂ ಬೆಂಗಳೂರು–ಮೈಸೂರು ನಡುವೆ ಒತ್ತಡಕ್ಕೆ ಅನುಗುಣವಾಗಿ ಇಂಟರ್‌ಸಿಟಿ ಒದಗಿಸಲು ನೈರುತ್ಯ ರೈಲ್ವೆಗೆ ಮನವಿ ಮಾಡಿದೆ.

**ಮಣಿಯದ ನೌಕರರು:** ಇದಾವುದಕ್ಕೂ ಮಣಿಯದ ಸಾರಿಗೆ ನೌಕರರು, ಮುಷ್ಕರ ಮುಂದುವರಿಸುವುದರ ಜತೆಗೆ ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸಲು ಯೋಜನೆ ರೂಪಿಸುತ್ತಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿದ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ಅಧ್ಯಕ್ಷ ಆರ್. ಚಂದ್ರಶೇಖರ್, 'ಯಾವುದೇ ಕಾರಣಕ್ಕೂ ಮುಷ್ಕರ ಕೈಬಿಡುವುದಿಲ್ಲ. ಸರ್ಕಾರ ನಮ್ಮ ಬೇಡಿಕೆ ಈಡೇರಿಸಲೇಬೇಕು. ನಾಳೆ ಇನ್ನೂ ದೊಡ್ಡಮಟ್ಟದಲ್ಲಿ ಮುಷ್ಕರ ನಡೆಯಲಿದೆ. ಏ.10 ಮತ್ತು 11ರಂದು ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳಲ್ಲಿ ಸಭೆ ನಡೆಸಲಾಗುವುದು. ಮುಂದಿನ ಹೋರಾಟಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು. ಇದುವರೆಗೆ ಎಲ್ಲಿಯೂ ಕೊರೊನಾಗೆ ಸಂಬಂಧಿಸಿದ ನೀತಿ ನಿಯಮಗಳನ್ನು ಉಲ್ಲಂಘಿಸದೆ, ಮುಷ್ಕರ ಯಶಸ್ವಿಯಾಗಿ ನಡೆಸುತ್ತಿದ್ದೇವೆ. ಆದರೆ, ಸರ್ಕಾರ ಹೋರಾಟ ಹತ್ತಿಕ್ಕಲು ಯತ್ನಿಸುತ್ತಿದೆ. ಅಷ್ಟಕ್ಕೂ ನಮಗೆ ಹೋರಾಟ ಮಾಡಲೇಬೇಕೆಂಬ ಹಠ ಇಲ್ಲ, 6ನೇ ವೇತನ ಆಯೋಗ ಜಾರಿಯಾದರೆ, ಒಂದು ಗಂಟೆಯಲ್ಲಿ ಮು ಷ್ಕರ ಕೈಬಿಡುತ್ತೇವೆ' ಎಂದು ಸ್ಪಷ್ಟಪಡಿಸಿದರು.

## ಮೊದಲ ದಿನ 17 ಕೋಟಿ ನಷ್ಟ!

ಮುಷ್ಕರದಿಂದ ಮೊದಲ ದಿನ ಅಂದರೆ ಬುಧವಾರ ನಾಲ್ಕೂ ನಿಗಮಗಳು ಸೇರಿ 17 ಕೋಟಿ ರೂ. ನಷ್ಟ ಉಂಟಾಗಿದೆ. ಈ ಪೈಕಿ ಕೆಎಸ್‌ಆರ್‌ಟಿಸಿಗೆ 7 ಕೋಟಿ, ಬಿಎಂಟಿಸಿಗೆ 3 ಕೋಟಿ, ವಾಯುವ್ಯ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ತಲಾ 3.5 ಕೋಟಿ ರೂ. ಆದಾಯ ನಷ್ಟ ಆಗಿದೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

**ರೈತ ಸಂಘ, ಎಐಟಿಯುಸಿ ಬೆಂಬಲ:** ಈ ನಡುವೆ ನೌಕರರ ಹೋರಾಟಕ್ಕೆ ರಾಜ್ಯ ರೈತ ಸಂಘ ಹಾಗೂ ಎಐಟಿಯುಸಿ ಬೆಂಬಲ ಸೂಚಿಸಿದೆ. 'ಹಗಲು–ರಾತ್ರಿ, ಮಳೆ–ಬಿಸಿಲು ಎನ್ನದೆ ಸೇವೆ ಸಲ್ಲಿಸುವ ನೌಕರರ ಬೇಡಿಕೆಗಳನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಬೇಕು. ಅದೇ ರೀತಿ, ಸಾರಿಗೆ ವ್ಯವಸ್ಥೆ ಅಗತ್ಯ ಸೇವೆಯಾಗಿದೆ. ಬಸ್ ಓಡಿಸದೆ ಮುಷ್ಕರ ನಡೆಸುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗಲಿದೆ. ಆದ್ದರಿಂದ ಕೆಲಸಕ್ಕೆ ಹಾಜರಾಗಿ, ಚಳವಳಿ ನಡೆಸಬೇಕು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಹಾಗೂ ಕಾರ್ಯದರ್ಶಿ ಪಿ. ಗೋಪಾಲ ಸಲಹೆ ನೀಡಿದ್ದಾರೆ. ಎಐಟಿಯುಸಿ ರಾಜ್ಯ ಘಟಕದ ಅಧ್ಯಕ್ಷ ಅನಂತ ಸುಬ್ಬರಾವ್, 'ಖಾಸಗಿ ಬಸ್ ಓಡಿಸೋದು ಪರ್ಯಾಯ ಅಲ್ಲ. ಸರ್ಕಾರ ಕೂಡಲೇ ಮಾತುಕತೆಗೆ ಮುಂದಾಗಬೇಕು. ಈಗಾಗಲೇ ಸರ್ಕಾರ 3 ತಿಂಗಳ ಕಾಲ ಕಾಲಹರಣ ಮಾಡಿದೆ. ಸರ್ಕಾರದ ಮೇಲೆ ನಂಬಿಕೆ ಹೊರಟು ಹೋಗಿದೆ' ಎಂದಿದ್ದಾರೆ.